ಶ್ರೀರಾಘವೇಂದ್ರಗುರುಸಾರ್ವಭೌಮ ವಿರಚಿತ

# ದಶಾವತಾರಸ್ತುತಿಃ

ವೇದಸಿದ್ಧಮಣುತೋಽಪ್ಯಣುಭಾವಂ ಮೋದದಾಯಿ ಮಹತೋಽಪಿ ಮಹತ್ವಮ್ ।
ಬಿಭ್ರತಂ ಪ್ರಥಯಿತುಂ ಮನವೇ ತ್ವಾಂ ಮೀನತಾಂ ಶರಣಯಾಮಿ ಭವಂತಮ್ ॥೧॥

*ತಾತ್ಪರ್ಯ : ಸ್ವಾಮಿ, ಶ್ರೀ ಮೂಲರಾಮಚಂದ್ರ, ಚಾಕ್ಷುಷ ಮನ್ವಂತರ ಮಧ್ಯದಲ್ಲಿ ಕೃತಮಾಲಿಕಾತೀರದಲ್ಲಿ ಅರ್ಘ್ಯಪ್ರದಾನಮಾಡುತ್ತಿದ್ದ ಸತ್ಯವ್ರತ ಮಹಾರಾಜನನ್ನು ಅನುಗ್ರಹಿಸಲು ಅವನ ಅಂಜಲಿಯಲ್ಲಿ ಬಂದು "ಅಣೋರಣೀಯಾನ್ ಮಹತೋಮಹೀಯಾನ್" ಎಂದು ವೇದಪ್ರಸಿದ್ಧವಾದ ನಿನ್ನ ಮಹಿಯನ್ನು ತೋರಲು ಅಣುತ್ವಮಹತ್ವಗಳನ್ನು ಪ್ರದರ್ಶಿಸಿದ ಮೀನರೂಪಿಯಾದ ನಿನಗೆ ಶರಣಾಗತನಾಗಿದ್ದೇನೆ.*

ವೇದವಿಪ್ಲುತಿಕೃತಂ ವಿಧಿಜಾಡ್ಯಂ ಹಂತ ಹಂತುಮದಧಾಜ್ಜಲಜನ್ಮ ।
ಮೀನಭಾವನಭರೇಣ ತತೋ ಮೇ ವಿಷ್ಣಣೇಹಿ ವಿಮಲಂ ಪ್ರತಿಬೋಧಂ ॥೨॥

*ತಾತ್ಪರ್ಯ : ಹಿಂದೊಮ್ಮೆ ಶ್ರೀಬ್ರಹ್ಮದೇವರು ಧ್ಯಾನಸ್ಥರಾಗಿದ್ದಾಗ ದೇವತೆಗಳ ಬಲವನ್ನು ಕುಗ್ಗಿಸಲು ಹಯಗ್ರೀವನೆಂಬ ದೈತ್ಯನು ಮಾಯೆಯಿಂದ ವೇದಗಳನ್ನು ಅಪಹರಿಸಿದ್ದರಿಂದ ಬ್ರಹ್ಮದೇವರಿಗೆ ಸೃಷ್ಟಿ ವಿಷಯದಲ್ಲಿ ಅಜ್ಞಾನ ಉಂಟಾಗಲು, ಕರುಣಾಪಾರಾವಾರನಾದ ನೀನು ಹಯಗ್ರೀವನೆಂಬ ದೈತ್ಯನನ್ನು ಸಂಹರಿಸಿ, ವೇದಗಳನ್ನು ಉದ್ಧರಿಸಿ ಬ್ರಹ್ಮದೇವರ ಅಜ್ಞಾನವನ್ನು ಪರಿಹರಿಸಿದಿ. ಅಂತಹ ಮೀನರೂಪಿಯಾದ ಶ್ರೀಮೂಲರಾಮ! ನೀನು ನಮಗಿರುವ ನಿರ್ಮಲವಾದ ಯಥಾರ್ಥಜ್ಞಾನವನ್ನು ಅಭಿವೃದ್ಧಿಸು.*

ಆತ್ಮನೈವ ಕಮಠೇನ ವಿತನ್ವನ್ಮಂದರೇಣ ಚ ಭವಾನರಣೀ ದ್ವೇ ।
ಮತ್ಸ್ಯತೋಽಕೃತ ಹಲಾಹಲವಹ್ನಿಂ ಹೋತುಮಿಂದ್ರರಿಪುವೃಂದಹವೀಂಷಿ ॥೩॥

*ತಾತ್ಪರ್ಯ : ಸ್ವರೂಪಭೂತವಾದ ಕೂರ್ಮರೂಪ ಮತ್ತು ಮಂದರ ಪರ್ವತವೆಂಬ ಎರಡು ಅಗ್ನಿಸಾಧನ ದ್ರವ್ಯಗಳನ್ನುಂಟು ಮಾಡಿ ಇಂದ್ರ ಶತ್ರು ಸಮೂಹವೆಂಬ ಹವಿಸ್ಸುಗಳನ್ನು ಹೋಮ ಮಾಡಲು ಸಮುದ್ರಮಥನದ ಮೂಲಕ ಕಾಲಕೂಟವೆಂಬ ಅಗ್ನಿಯನ್ನು ಸೃಜಸಿದ ಕೂರ್ಮರೂಪಿಯಾದ ಶ್ರೀಮೂಲರಾಮಚಂದ್ರ ನಿನ್ನೀ ಲೀಲಾವಿನೋದವನ್ನು ಯಾರು ತಾನೆ ಕೊಂಡಾಡದಿರುವರು ?*

ಆದಿಸೂಕರ ಧರೋದ್ಧರಣಂ ತೇ ಸಿಂಧುಬಂಧುಜಠರಾತ್ ಶ್ರುತಿಗೀತಮ್ ।
ಮಾದೃಶಾಂ ಭವಪಯೋಧಿಗತಾನಾಂ ರಕ್ಷಣೇ ಪರಿಚಯಂ ತದವೈಮಃ ॥೪॥

*ತಾತ್ಪರ್ಯ : ಶ್ರೀಆದಿವರಾಹಾವತಾರಿಯಾದ ರಾಮಭದ್ರ! ನೀನು ಸಮುದ್ರ ಮಧ್ಯದಿಂದ ಭೂಮಿಯನ್ನು ಉದ್ಧರಿಸಿದ್ದು ವೇದಪ್ರತಿಪಾದ್ಯವಾಗಿದೆ. ಆ ಪರಿಯನ್ನು ಅವಲೋಕಿಸಿದರೆ ಭವಸಾಗರಮಗ್ನರಾದ ನಮ್ಮಂಥವರನ್ನು ಉದ್ಧರಿಸಲು ಕೈಕೊಂಡ ಪ್ರಯೋಗವೆಂದು ಭಾವಿಸುತ್ತೇವೆ.*

ಪೂರ್ಣಚಂದ್ರಗತಲಕ್ಷಣರೇಖಾ ಲಕ್ಷಿತಾ ಯದಿ ತದೈಕಕಲಾಯಾಮ್ ।
ಸಂಶ್ರಿತೇಂದುಮಣಿದಂಷ್ಟ್ರಧರಂ ಸ್ಯಾತ್ತ್ವೋಪಮಾ ಭವತಿ ಸೂಕರರೂಪ ॥೫॥

*ತಾತ್ಪರ್ಯ : ಶ್ರೀ ವರಹಾಮೂರ್ತೆ! ಚಂದ್ರನ ಒಂದು ಕಲೆಯಿಂದ ಅವನಲ್ಲಿರುವ ಕಲಂಕರೇಖೆಯು ಶೋಭಿಸುವಂತೆ, ಚಂದ್ರನ ಕಲೆಯಂತಿರುವ ದಂಷ್ಟ್ರಯುಕ್ತನಾದ ನಿನ್ನ ಕೃಷ್ಣವರ್ಣದ ಶರೀರವು ಶೋಭಿಸುವುದು.*

ತಾವಕಂ ನರಹರೇಽತಿವಿರುದ್ಧಂ ವೇಷಧಾರಣಮಿದಂ ತನುತೇನಃ ।
ಅತ್ಯಸಂಘಟಕರ್ಮ ಚ ಕೃತ್ವಾ ಪಾಲಯೇ ಪ್ರಣತಮಿತ್ಯುಪದೇಶಮ್ ॥೬॥

ತಾತ್ಪರ್ಯ : ದೇವ, ಲೋಕದಲ್ಲಿ ಭಕ್ತಜನರನ್ನು ರಕ್ಷಿಸುವಾಗ ಸೌಮ್ಯರೂಪವನ್ನೂ ಶತ್ರು ಸಂಹಾರಕಾಲದಲ್ಲಿ ಉಗ್ರರೂಪವನ್ನೂ ನೀನು ಧರಿಸುವುದು ಕಂಡು ಬಂದಿವೆ. ಆದರೆ ಈಗ ನೀನು ಉಗ್ರವಾದ ಶ್ರೀನೃಕಂಠೀರವರೂಪದಿಂದ ನನ್ನನ್ನು (ಪ್ರಹ್ಲಾದ ರೂಪಿಯಾದ ನನ್ನನ್ನು) ರಕ್ಷಣಮಾಡಲು ಬಂದಿರುವುದನ್ನು ನೋಡಿದರೆ ಭಕ್ತ ಜನರಿಗಾಗಿ ಹಿಂದೆಂದೂ ಮಾಡದ ಅತ್ಯಂತ ದುರ್ಘಟ ಕಾರ್ಯವನ್ನಾದರೂ ಮಾಡಿ ನಾನು ಭಕ್ತರನ್ನು ರಕ್ಷಿಸುತ್ತೇನೆಂದು ಅಭಯ ವೀಯುವಂತೆ ತೋರುತ್ತಿದೆ.

ದಾರಿತೋದರ ಹಿರಣ್ಯಕಶತ್ರೋರಾಂತ್ರಮಾಲ್ಯಕಲಿತಂ ತವ ರೂಪಮ್ ।
ನಾರಸಿಂಹಕಲಯೇಽನನುಭೂತಂ ಶಾರದಂ ಜಲಧರಂ ಸಹಶಂಪಮ್ ॥೭॥

ತಾತ್ಪರ್ಯ : ಶ್ರೀ ಮೂಲರಾಮಾಭಿನ್ನನಾದ ನೃಸಿಂಹದೇವ! ಹಿರಣ್ಯಕಶಿಪುವಿನ ಉದರವನ್ನು ಸೀಳಿ ಕರುಳಮಾಲೆಯನ್ನು ಧರಿಸಿರುವ ನಿನ್ನ ರೂಪವು ಶರತ್ಕಾಲೀನವಾದ ಮಿಂಚಿನಿಂದೊಡಗೂಡಿದ ಮೇಘದಂತೆ ರಾಜಿಸುತ್ತಿದೆ. (ಶರತ್ಕಾಲದ ಮೇಘದಲ್ಲಿ ಮಿಂಚಿನ ಸಂಭಂದವಿಲ್ಲ. ಆದರೂ ಇಲ್ಲಿ ಅನನುಭೂತವಾದ ಶರತ್ಕಾಲೀನ ಮಿಂಚಿನಿಂದ ಯುಕ್ತವಾದ ಮೇಘದಂತೆ ನಿನ್ನ ರೂಪ ಕಂಗೊಳಿಸುತ್ತಿದೆ ಎಂದು ನೃಸಿಂಹದೇವರನ್ನು ಶ್ರೀಗುರುರಾಜರು ಅಭೂತೋಪಮಾಲಂಕಾರದಿಂದ ವರ್ಣಿಸಿದ್ದಾರೆ).

ಜಾನತಾಂ ನಿಜಮನಃ ಪರಮಾಣೌ ಮಾತುಮೇವ ಬಲಿನಿಗ್ರಹದಂಭಾತ್ ।
ವಾಮನಂ ಯದಭವತ್ತವರೂಪಂ ತತ್ಸುಖೇನ ಭಗವನ್ ಹೃದಿ ಕುರ್ಮಃ ॥೮॥

ತಾತ್ಪರ್ಯ : ಶ್ರೀ ವಾಮನಮೂರ್ತಿಯೇ, ಲೋಕದಲ್ಲಿ ಸಣ್ಣ ಪದಾರ್ಥದಲ್ಲಿ ದೊಡ್ಡ ಪದಾರ್ಥದ ಪ್ರವೇಷ ಕಷ್ಟಸಾಧ್ಯ. ನೀನು ಮುನಿಜನಗಳ ಮನಸ್ಸಿನಲ್ಲಿ ಪ್ರವೇಶಿಸಲಿಚ್ಛಿಸಿ ನೀನು ಅತಿ ದೊಡ್ಡವನಾದುದರಿಂದ ಸಣ್ಣದಾದಮುನಿಮಾನಸ ಪ್ರದೇಶವು ಕಷ್ಟವೆಂದು ಮನಗಂಡು, ಬಲಿಚಕ್ರವರ್ತಿಯನ್ನು ನಿಗ್ರಹಿಸುವ ವ್ಯಾಜದಿಂದ ಅಣುವಾದ ವಾಮನರೂಪವನ್ನು ಸ್ವೀಕರಿಸಿದ್ದರಿಂದ ನಾವೀಗ ಸುಖವಾಗಿ ನಿನ್ನನ್ನು ಧ್ಯಾನಮಾಡುತ್ತೇವೆ.

ಚಂದ್ರಮಾ ಇವ ಭುವೋ ವಿರಚನ್ನಕ್ಷತ್ರಯೋಗಮಪಿ ಯತ್ವಮಲಾಸೀಃ ।
ತೇನಶಾತ್ರವಯಶೋಂಬುಜರಾಜೀ ಮುದ್ರಣಂ ತವ ಕೃತಿಂ ಬಹು ಮನ್ಯೇ ॥೯॥

ತಾತ್ಪರ್ಯ : ಹೇ ಪರುಶರಾಮದೇವ! ಭೂಮಿಯಲ್ಲಿರುವ ಕ್ಷತ್ರಿಯ ಸಂಹಾರದ್ವಾರಾ ನಕ್ಷತ್ರಯೋಗವನ್ನೂ, ಶತ್ರುಗಳ ಕೀರ್ತಿ ಎಂಬ ಕಮಲಗಳ ಸಂಕೋಚವನ್ನು ಮಾಡಿರುವುದರಿಂದ ಚಂದ್ರನಂತೆ ಪ್ರಕಾಶಮಾನವಾದ ನಿನ್ನ ಪರುಶುರಾಮ ರೂಪವನ್ನು ಪೂಜಿಸುತ್ತೇವೆ.

ತಾರಣೇ ದುರಿತನೀರನಿಧೇರ್ನಃ ಸೇತುಭಾವಮಚಿರೇಣ ಯಿಯಾಸೋಃ ।
ಭಾಸತೇ ತವ ವಿಭೋ ಕರುಣಾಯಾಃ ಪೂರ್ವರಂಗ ಇವ ದಕ್ಷಿಣಸೇತುಃ ॥೧೦॥

ತಾತ್ಪರ್ಯ : ಶ್ರೀಮೂಲರಾಮಚಂದ್ರ! ಭಕ್ತಜನರನ್ನು ಪಾಪಸಮುದ್ರದಿಂದ (ಭವಬಂಧನದಿಂದ) ತಾರಣಮಾಡಿಸಿ ರಕ್ಷಿಸಲಿಚ್ಛಿಸುವ ನಿನ್ನ ಕಾರುಣ್ಯಕ್ಕೆ ಸೇತುಬಂಧನವು ಪೂರ್ವಪ್ರಯೋಗದಂತೆ ಭಾಸವಾಗುತ್ತಿದೆ.

ಬಂಧನಾಯ ಕೃತಮಾತ್ಮಜನನ್ಯಾಸ್ತಾದೃಶಂ ಚ ಗುಣಮಂಗ್ಯಕರೋರ್ಯತ್
ತೇನ ನಿರ್ಗುಣಮತಾನಿ ನಿರಸ್ಯನ್ದರ್ಶಯಸ್ಯಪಿ ನಿಜಾಂ ಗುಣವತ್ತಾಮ್ ॥೧೧॥

ತಾತ್ಪರ್ಯ : ಬಂಧನಾದಿರಹಿತನಾದ ಶ್ರೀಕೃಷ್ಣ! ನೀನು ತಾಯಿಯಾದ ಯಶೋದಾದೇವಿಯ ಗುಣ (ಹಗ್ಗ) ದಿಂದ ಬಂಧಿತನಾದುದುನ್ನು ಅಂದರೆ ಗುಣಸ್ವೀಕಾರ ಮಾಡಿದ್ದನ್ನು ನೋಡಿದರೆ, ಬ್ರಹ್ಮನು (ನೀನು) ನಿರ್ಗುಣಮುಂತಾಗಿ ಹೇಳುವ ನಿಖಿಲದುರ್ಮತಗಳನ್ನು ನಿರಾಕರಿಸಿ ಬ್ರಹ್ಮನು (ನೀನು) ಅನಂತಕಲ್ಯಾಣಗುಣಪೂರ್ಣನೆಂದು ಜಗತ್ತಿಗೆ ಪ್ರಕಟನ ಮಾಡುತ್ತಿರುವಂತೆ ಕಾಣುತ್ತಿದೆ.

ಸರ್ವದೇವರಥಚೇಷ್ಟನಮಂಗೀಕುರ್ವತಸ್ತವ ಸದೈವ ಜಗತ್ಯಾಮ್ ।
ಅರ್ಜುನೈಕರಥಸಾರಥಿಭಾವೋ ವಿಸ್ಮಯಾಯ ವಿದುಷಾಂ ನ ಕಥಂಚಿತ್ ॥೧೨॥

*ತಾತ್ಪರ್ಯ : ಹೇ ನಂದನಂದನ! ಪ್ರಪಂಚವ ಎಲ್ಲ ಜೀವರ ದೇಹರಥವೆಂಬ ದೇವರಥಗಳನ್ನು ಪ್ರೇರೇಪಿಸುವ ನಿನಗೆ ಅರ್ಜುನನ ಒಂದು ರಥಸಾರಥ್ಯ ಮಾಡಿದ್ದು ಜ್ಞಾನಿಗಳಿಗೆ ಖಂಡಿತವಾಗಿ ಆಶ್ಚರ್ಯಕರವಾಗಿ ತೋರುವುದಿಲ್ಲ.*

ತ್ವಂ ಕುಚೇಲಮುನಿಮೀಷಕುಚೇಲಾದ್ಯರ್ಪಣೇನ ಕೃತವಾನಕುಚೇಲಮ್ ।
ಸೋಭವತ್ತದಪಿ ಚಾರಕುಚೇಲಾಲಂಕೃತಸ್ತದಿದಮದ್ಭುತಮಾಸೀತ್ ॥೧೩॥

*ತಾತ್ಪರ್ಯ : ಪ್ರಭು! ಕುಚೇಲನು ಕುಚೇಲ (ಛಿದ್ರವಸ್ತ್ರ) ದಲ್ಲಿದ್ದ ಪದಾರ್ಥ (ಅವಲಕ್ಕಿ)ವನ್ನು ಕೊಟ್ಟಿದ್ದರಿಂದ ನೀನವನನ್ನು ಅಕುಚೇಲ (ಛಿದ್ರವಸ್ತ್ರರಹಿತ) ನನ್ನಾಗಿ ಮಾಡಿದಿ. ಆದರೂ ಅವನು ಕುಚೇಲಾ (ಉತ್ತಮ ವಸ್ತ್ರಾಲಂಕೃತನೆ) ಲಂಕೃತನೇ ಆದನು. ಇದು ಅತ್ಯಂತ ಆಶ್ಚರ್ಯಕರ. ಸುಧಾಮನು ತನ್ನ ಹರಕು ಬಟ್ಟೆಯಲ್ಲಿದ್ದ ಒಂದು ಹಿಡಿ ಅವಲಕ್ಕಿಯನ್ನು ನಿನಗರ್ಪಿಸಿದ್ದರಿಂದ ಅವನಿಗೆ ಪೀತಾಂಬರಾದಿಗಳನ್ನು ಧನಕನಕಾದಿ ಸಂಪತ್ತನ್ನು ಅನುಗ್ರಹಿಸಿದ ನಿನ್ನ ಭಕ್ತವಾತ್ಸಲ್ಯವನ್ನು ವರ್ಣಿಸಲು ಯಾರು ಸಮರ್ಥರಾದಾರು?*

ಏವಮಾದಿ ವಿವಿಧೈರವತಾರೈಃ ಪಾಲಿತಾಖಿಲಜನೌಘ ಮಮಾಘಮ್ ।
ಸನ್ನಿರಸ್ಯ ಕಮಲಾಸ್ಯ ನಮಸ್ಯಾಂ ಸ್ವೀಕುರುಷ್ವ ರಘುವಂಶವತಂಸ ॥೧೪॥

*ತಾತ್ಪರ್ಯ : ಹೀಗೆ ಮತ್ಸ್ಯಕೂರ್ಮಾದ್ಯನೇಕಾವತಾರಗಳನ್ನೆತ್ತಿ ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ಮಾಡಿದ ಕಮಲವದನನಾದ ಹೇ ಶ್ರೀಮೂಲರಾಮಚಂದ್ರದೇವ - ನನ್ನ ಪಾಪವನ್ನು ಸಮೂಲವಾಗಿ ನಾಶಮಾಡಿ ನನ್ನ ನಮಸ್ಕಾರವನ್ನು ಸ್ವೀಕರಿಸುವ ಪ್ರಭು. ಇಂತು ವಿನಯಪೂರ್ವಕವಾಗಿ ಶ್ರೀಮೂಲರಾಮನನ್ನು ಸ್ತುತಿಸಿದ ಮೇಲೆ ಗುರುರಾಜರು ಕಣ್ತೆರೆದರು.*

॥ಶ್ರೀಕೃಷ್ಣಾರ್ಪಣಮಸ್ತು॥

**Send your comments and suggestions to Vijayadasaru@gmail.com**
**Courtesy:Parimala**